# <u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಕೃಷಿ ಇಲಾಖೆಯ 2012-13ನೇ ಸಾಲಿನ ಚಾಲ್ತಿ ಯೋಜನೆಗಳ ಹೆಚ್ಚುವರಿ / ಹೊಸ ಘಟಕಗಳಿಗೆ ಮಂಜೂರಾತಿ. (ವಿದ್ಯಾರ್ಥಿಗಳಿಗೆ ಗೌರವಧನ ಬಗ್ಗೆ.

**<u>ಸರ್ಕಾರದ ಆದೇಶ ಸಂಖ್ಯೆ: ಕೃಇ/152/ಕೃಸಾಗೊ/2012, ಬೆಂಗಳೂರು,</u>**
**<u>ದಿ: 26-06-2012.</u>**

ಓದಲಾಗಿದೆ: ಕೃಷಿ ನಿರ್ದೇಶಕರ ಪತ್ರ ಸಂ: ಪಿಎಲ್‌ಎನ್/ತಾಂ-4/ಹೆ.ಹೊ.ಘ/2012-13,
ದಿ: 27-04-2012.

**<u>ಪ್ರಸ್ತಾವನೆ:</u>**

ಮೇಲೆ ಓದಲಾದ ಕೃಷಿ ನಿರ್ದೇಶಕರ ಪತ್ರದಲ್ಲಿ ಕೃಷಿ ಇಲಾಖೆಯ 2012-13 ನೇ ಸಾಲಿನ ಚಾಲ್ತಿ ಯೋಜನಾ ಕಾರ್ಯಕ್ರಮಗಳಿಗೆ ಮಂಜೂರಾತಿಯನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಚಾಲ್ತಿ ಯೋಜನಾ ಕಾರ್ಯಕ್ರಮಗಳ ಪೈಕಿ ಹೊಸ/ ಹೆಚ್ಚುವರಿ ಘಟಕಗಳನ್ನು ಹೊಂದಿರುವ ಕಾರ್ಯಕ್ರಮಗಳನ್ನು ಗುರುತಿಸಿ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಮಂಜೂರಾತಿಯನ್ನು ಕೋರಲಾಗಿದೆ.

ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಭಾಷಣದಲ್ಲಿ ರೈತ ಸಂಪರ್ಕ ಕೇಂದ್ರಗಳ ಬಲವರ್ಧನೆ ಯೋಜನೆಯಡಿ ರೈತ ಸಂಪರ್ಕ ಕೇಂದ್ರಗಳಿಗೆ ಕೃಷಿ ವಿದ್ಯಾರ್ಥಿಗಳ ಹಾಗೂ ವಿಜ್ಞಾನಿಗಳ ನಿಯೋಜನೆ ಘೋಷಿಸಿದ್ದು, ಆದರೆ ಸಂಪುಟ-6 ರಲ್ಲಿ ಈ ಕಾರ್ಯಕ್ರಮಗಳಿಗೆ ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ. ಮುಂದುವರೆದು, ರೈತ ಸಂಪರ್ಕ ಕೇಂದ್ರದ ವಿಶೇಷ ಅಭಿವೃದ್ಧಿ ಯೋಜನೆ (ಲೆ.ಶೀ:4401-00-001-1-04 ಉ.ಶೀ-133) ಅಡಿ ಒದಗಿಸಲಾಗಿರುವ ರೂ.5000.00 ಲಕ್ಷಗಳು ರಾಜ್ಯದ 114 ಹಿಂದುಳಿದ ತಾಲ್ಲೂಕುಗಳಲ್ಲಿ ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಲು ಮೀಸಲಾಗಿದ್ದು ಈ ಅನುದಾನವನ್ನು ರೈತ ಸಂಪರ್ಕ ಕೇಂದ್ರಗಳಿಗೆ ಕೃಷಿ ವಿದ್ಯಾರ್ಥಿಗಳ ಹಾಗೂ ವಿಜ್ಞಾನಿಗಳ ನಿಯೋಜನೆಗೆ ಉಪಯೋಗಿಸಲು ಸಾಧ್ಯವಿರುವುದಿಲ್ಲ. ಆದುದರಿಂದ, ಹೊಸ/ಹೆಚ್ಚುವರಿ ಘಟಕಗಳನ್ನು ಸಮಗ್ರ ಕೃಷಿ ವಿಸ್ತರಣಾ ಪದ್ಧತಿ ಯೋಜನೆಯಡಿ ಪ್ರಸ್ತಾಪಿಸಿದೆ.

2012-13 ನೇ ಸಾಲಿನ ಸಮಗ್ರ ಕೃಷಿ ವಿಸ್ತರಣಾ ಪದ್ಧತಿ ಯೋಜನೆ (ಲೆ.ಶೀ:2401-00-109-0-27 (ಯೋಜನೆ) ಉ.ಶೀ: 059) ಯಡಿ ಒಟ್ಟು ರೂ.9000.00 ಲಕ್ಷಗಳನ್ನು ಒದಗಿಸಲಾಗಿದ್ದು, ಇದರಲ್ಲಿ ಚಾಲ್ತಿ ಯೋಜನಾ ಕಾರ್ಯಕ್ರಮಗಳಿಗೆ ರೂ. 5200.00 ಲಕ್ಷಗಳು ಹಾಗೂ ಭೂಚೇತನ ಕಾರ್ಯಕ್ರಮದಡಿ ವಿವಿಧ ಹೊಸ/ ಹೆಚ್ಚುವರಿ ಘಟಕಗಳಿಗೆ ರೂ.3800.00 ಲಕ್ಷಗಳು ಬೇಕಾಗಿರುತ್ತದೆ. ಆದುದರಿಂದ ಹೊಸ / ಹೆಚ್ಚುವರಿ ಘಟಕವಾದ ಕೃಷಿ ವಿದ್ಯಾರ್ಥಿಗಳ ಹಾಗೂ ವಿಜ್ಞಾನಿಗಳ ನಿಯೋಜನೆಗೆ ಅನುಮೋದನೆ ಹಾಗೂ ರೂ.250.00 ಲಕ್ಷಗಳು ಹೆಚ್ಚುವರಿ ಅನುದಾನದ ಒದಗಿಸಿ ಶೀಘ್ರವಾಗಿ ಮಂಜೂರಾತಿ ಆದೇಶವನ್ನು ಹೊರಡಿಸಬೇಕೆಂದು ಕೃಷಿ ನಿರ್ದೇಶಕರು ಕೋರಿದ್ದಾರೆ.

ಆದ್ದರಿಂದ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಅದಕ್ಕಾಗಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

..2.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, 2012-13ನೇ ಸಾಲಿನಲ್ಲಿ ಕೃಷಿ ಆಯವ್ಯಯದಲ್ಲಿ ಘೋಷಿಸಿದಂತೆ, ರೈತ ಸಂಪರ್ಕ ಯೋಜನೆಯಡಿ ರೈತ ಸಂಪರ್ಕ ಕೇಂದ್ರಗಳಿಗೆ ಕೃಷಿ ವಿಶ್ವವಿದ್ಯಾಲಯದಿಂದ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ ಬಳಿಕ ವಿದ್ಯಾರ್ಥಿಗಳ ಕನಿಷ್ಠ ಪ್ರಾಯೋಗಿಕ ಕೌಶಲ್ಯ ಕ್ಷೇತ್ರ ಅನುಭವ ಮತ್ತು ಜ್ಞಾನಕ್ಕಾಗಿ ಅವರನ್ನು ರೈತ ಸಂಪರ್ಕ ಕೇಂದ್ರಗಳಿಗೆ ಕನಿಷ್ಠ 3 ತಿಂಗಳ ಅವಧಿಗೆ ನಿಯೋಜಿಸಿ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳು ರೂ.1500.00 ಗಳಂತೆ ಗೌರವಧನ ನೀಡುವ ಹೊಸ ಯೋಜನೆಗೆ ಸರ್ಕಾರ ಅನುಮತಿ ನೀಡಿದೆ. ಇದಕ್ಕೆ ಅವಶ್ಯವಿರುವ ಅನುದಾನವನ್ನು 2012-13ನೇ ಸಾಲಿನ ಲೆಕ್ಕ ~~ಶೀರ್ಷಿಕೆ 2401-00-109-0-~~27 ಸಮಗ್ರ ಕೃಷಿ ವಿಸ್ತರಣಾ ಯೋಜನೆ ~~ಅಡಿ ಒದಗಿಸಲಾದ~~ ಅನುದಾನ ಭರಿಸುವಂತೆ ಆದೇಶಿಸಿ ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿದೆ.

ಮುಂದುವರೆದು, ರೈತ ಸಂಪರ್ಕ ಕೇಂದ್ರ ಯೋಜನೆಯಡಿ ರೈತ ಸಂಪರ್ಕ ಕೇಂದ್ರಗಳಿಗೆ ನಿಯೋಜಿಸುವ ವಿಜ್ಞಾನಿ / ವಿಷಯ ತಜ್ಞರಿಗೆ ನಿಯೋಜನೆಗೆ ಬಂದಾಗ ಕೆ.ಸಿ.ಎಸ್.ಆರ್. ನಿಯಮದನ್ವಯ ಟಿ.ಎ/ ಡಿ.ಎ. ಕ್ಲೇಮ್ ಮಾಡಲು ಅನುಮತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಯು ಹೊರಡಿಸಿರುವ ಟಿಪ್ಪಣಿ ಅನುಕ್ರಮವಾಗಿ ಸಂ: ಆಇ/247/ವೆಚ್ಚ-4/2012, ದಿ:05-06-2012 ಮತ್ತು ಸಂ:ಪಿಡಿ/19/ಪಿಎಫ್‌ಒ/2012, ದಿ:08-06-2012 ರ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಶ್ರೀರಾಮ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ.

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
4. ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು/ಧಾರವಾಡ/ರಾಯಚೂರು.
5. ವಿಶೇಷಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಶಿವಮೊಗ್ಗ.
6. ನಿರ್ದೇಶಕರು, ಖಜಾನೆ ಇಲಾಖೆ(SHT), ಬೆಂಗಳೂರು.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-4 ಮತ್ತು 5), ಆರ್ಥಿಕ ಇಲಾಖೆ.
9. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ.
10. ಶಾಖಾಧಿಕಾರಿ, ಕೃಷಿ -ಬಿ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
11. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.